Sri S. R. KANTHI.—It is a good suggestion. That is being considered by Government.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಾವು ಹೇಳಿದಿರಿ ಎಷ್ಟು ದಿವಸಕ್ಕೆ ಸಾಧ್ಯವಾಗುತ್ತದೋ ಗೊತ್ತಿಲ್ಲ ಎಂದು. ಅಲ್ಲಿಯವರೆಗೆ ಪ್ರಾರಂಭ ಮಾಡಿರುವ ಶಾಲೆಗಳ ಗತಿ ಏನು ?

Sri S. R. KANTHI.—Certain proportion of teachers are to be trained not all.

ಶ್ರೀ ಬಿ. ಬೈರಪ್ಪಾಜಿ.—ಈ ವರ್ಷ ಮತ್ತು ಕಳೆದ ವರ್ಷ ಬಿ. ಎ., ಬಿ. ಎಸ್. ಸಿ. ಗ್ರಾಜುಯೇಟ್ಸ್ ಎಷ್ಟೋ ಸ್ಕೂಲುಗಳಿಗೆ ಸಿಕ್ಕಿಲ್ಲ. ಅವರೇ ಸಿಕ್ಕದೇ ಇರುವಾಗ, ಟ್ರೈನ್ಡ್ ಗ್ರಾಜುಯೇಟ್ಸ್ ಸಿಕ್ಕುವುದು ಕಷ್ಟವಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಪ್ರಾರಂಭ ಮಾಡಿರುವ ಪಾಠಶಾಲೆಗಳಿಗೆ ಸರ್ಕಾರದ ನೆರವು ಏನು ಬರುತ್ತದೆ ಅದನ್ನು ತಪ್ಪಿಸದೇ ಇರುವುದಕ್ಕೆ ವ್ಯವಸ್ಥೆ ಮಾಡಬೇಕು.

Sri S. R. KANTHI.—So far as the employment of trained teachers is concerned, Government cannot make a relaxation because the quality of education will suffer if we do that. After all, these High Schools are meant to give proper quality education. Since the Government is trying to give quality education, if we allow teachers who are untrained to continue as teachers, it will end in some chaos.

Sri S. RAJAGOPAL.—Sir, whether the Government is having any phased programme to solve this graduate teachers problem ?

Sri S. R. KANTHI.—Government has a programme. I have already explained that this year the strength of admissions to the B. Ed. colleges has increased and two more colleges have been started.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ತರಬೇತಾದ ಉಪಾಧ್ಯಾಯರ ಸಂಖ್ಯೆ ಕಡಿಮೆ ಇರುವಾಗ, ಈಗಾಗಲೇ ಮುಚ್ಚಿರುವ ಉಜರೆ ಟ್ರೈನಿಂಗ್ ಸ್ಕೂಲ್ ತೆರೆದು ಹೆಚ್ಚು ಮಂದಿಗೆ ತರಬೇತು ಏತಕ್ಕೆ ಕೊಡಬಾರದು ?

Sri S R. KANTHI.—That is a different question altogether. Ujare Training College is intended to give training to primary teachers.

9-00 A. M.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇರತಕ್ಕಂಥ ಹೈಸ್ಕೂಲುಗಳಲ್ಲಿ ಟ್ರೇಂಡ್ ಶಿಕ್ಷಕರ ಸಂಖ್ಯೆ ಎಷ್ಟು ?

Sri S. R. KANTHI.—If the Hon'ble Member gives notice of a separate question, I will get the answers.

Sri GANJI VEERAPPA.—In view of the fact that large number of private high schools are started and there is a paucity of trained teachers will the Government think of giving the grants on conditional recommendation for sometime ?

Sri S. R. KANTHI.—No, Sir. The rule cannot be relaxed.

Free Secondary Education.

*Q.—250. Sri P. F. D'MELLOW (Nominated).

Will the Government be pleased to state :—

(a) whether they intend to introduce free Secondary Education throughout the State during 1966 ;

(b) whether this concession will apply to all students including those studying at private schools throughout the State ;

(SRI P. F. D'MELLOW)

(c) whether as the consequence of the grant of free Secondary Education have they decided to introduce a new or revised Grant-in-aid Code for schools;

(d) if so, whether they have consulted the management of private schools in the matter of such revision, to elucidate any problems that may result in respect of these schools as a result of its introduction?

A.—Sri S. R. KANTHI (Minister for Education).—

(a) Yes.

(b) No; the concession will apply only to students in Government, Local Body and Grant-in-aid schools.

(c) Amendments to the Grant-in-aid Code are under consideration.

(d) Their views will be taken into account after the draft revised Code is published inviting suggestion or objections.

Sri P. F. D'MELLOW.—Arising out of reply to (c), will the Government be pleased to inform the House whether it has taken any decision regarding the matter of salaries and other allowances to teachers in schools not giving free primary education?

†Sri S. R. KANTHI.—That question does not arise here.

Sri G. V. GOWDA.—May I know the nature of amendments that are under consideration?

Sri S. R. KANTHI.—That cannot be disclosed now. It is still in the consideration stage.

Sri S. RAJAGOPAL.—By implementing the free secondary education may I know the financial commitments by the Government?

Sri S. R. KANTHI.—I think it will be about additional fifteen lakhs.

Sri S. M. KRISHNA.—In 1966, free secondary education throughout the State in the Government sector you say it does not apply to private schools; but changes will be made in the Grant in-aid Code for private schools. Could the Hon'ble Minister spell out the proposed changes that Government are contemplating to the Grant-in-aid Code?

Sri S. R. KANTHI.—That is what I said. Fee concessions and full freeship will be available in Government, local bodies and aided high schools exclusive of Anglo-Indian High Schools. Here, the Hon'ble Member wants to know what will be the nature of Grant-in-aid Code. We are still in the consideration stage. We have got information from Madras and we are considering that.

Sri C. J. MUCKANNAPPA.—After amending this Grant-in-aid Code, may I know the financial implications?

Sri S. R. KANTHI.—We have not amended the Grant-in-aid Code. We have not worked out anything.

ಶ್ರೀ ಬಿ. ಬೈರಪ್ಪಾಜಿ.—ಉಚಿತ ಶಿಕ್ಷಣ ಕೊಡುವುದು ಜಾರಿಗೆ ಬಂದ ನಂತರ ಪ್ರೈವೇಟ್ ಸ್ಕೂಲುಗಳಿಗೆ ಈಗ ಕೊಡತಕ್ಕಂಥ ಅನುದಾನ ಸರ್ಕಾರದ ಸಹಾಯ ದ್ರವ್ಯ ಕೊಡುವ ಬಗ್ಗೆ ಏನು

ವ್ಯವಸ್ಥೆ ಇರುತ್ತದೆ ? ಇಲ್ಲದೇ ಹೋದರೆ ಪಾಠಶಾಲೆಗಳಿಗೆ ಕೊಡುವ ಫೈನಾನ್ಷಿಯಲ್ ಕಮಿಟ್‌ಮೆಂಟ್ ಯಾವ ರೀತಿ ಇರುತ್ತದೆ, ಹೇಳುತ್ತೀರಾ ?

Sri S. R. KANTHI.—The present Grant-in-aid Code will continue to operate till the new one comes into operation.

Sri G. V. GOWDA.—May I know the compel ing reasons why we should consider to amend the existing Grant-in-aid Code ?

Sri S. R. KANTHI. If the Hon'ble Member does not want it, I will call him and after he looks into it, if he still does not want, I have no objection. It is bound to be more favourable to more institutions. But if they don't want, I have no objection.

Mr. SPEAKER.—Next question Sri Krisha Singh.

Sri S. SHIVAPPA.—I want one information, one clarification from the Hon'ble Minister.

Mr. SPEAKER.—The Hon'ble Member may require so many things. Next question of Sri Channabyre Gowda, Question No. 234.

Incomplete Houses in the Nimbekaipura Colony.

*Q.—234. Sri B. CHANNABYRE GOWDA (Hoskote).—

Will the Government be pleased to state :—

the number of houses that are not yet completed in the Nimbekaipura Harijan, Girijan and Backward Classes colony in Bidarahalli Hobli, Hoskote Taluk ?

*A.—Sri S. NIJALINGAPPA (Chief Minister).—

Seven (7).

ಶ್ರೀ ಬಿ. ಚೆನ್ನಬೈರೇಗೌಡ.—ಏಳು ಮನೆಗಳು ಪೂರ್ತಿಯಾಗದೆ ಬಾಕಿ ಉಳಿದಿವೆ ಎಂದು ಉತ್ತರ ಹೇಳಿದ್ದೀರಿ. ಇವು ಎಷ್ಟು ವರ್ಷದಿಂದ ಈ ರೀತಿ ಇವೆ ? ಇದಕ್ಕೆ ಕಾರಣ ಏನು ?

ಶ್ರೀ ಎಸ್. ನಿಜಲಿಂಗಪ್ಪ.—1961-62 ರಲ್ಲಿ ಮನೆ ಕಟ್ಟುವುದಕ್ಕೆ 400 ರೂಪಾಯಿ ಹಣ ಕೊಟ್ಟಿದ್ದವು. ಮೂರು ನಾಲ್ಕು ವರ್ಷವಾದರೂ ಮನೆ ಕಟ್ಟಿಲ್ಲ. ಅವರಿಗೆ ಅನುಕೂಲವಾಗಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡ.—ಮನೆ ಇಲ್ಲದೆ ಅವರಿಗೆ ಕಷ್ಟವಾಗಿದೆ. ಇನ್ನೂ ಹೆಚ್ಚು ಹಣ ಒದಗಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಅವರಿಗೆ ಸಹಾಯ ಮಾಡಿದರೆ ಒಳ್ಳೆಯದು ಆಗುತ್ತದೆ.

ಶ್ರೀ ಬಿ. ಚೆನ್ನಬೈರೇಗೌಡ.—ಸರಕಾರದವರೇ ಮನೆಗಳನ್ನು ಕಟ್ಟಿಸಿ ಕೊಡುತ್ತಾರಲ್ಲವೇ ? ಇಲ್ಲ ಮಾತ್ರ ಮನೆಗಳನ್ನು ಯಾಕೆ ಕಟ್ಟಿಸಿ ಕೊಡಲಿಲ್ಲ ?

ಶ್ರೀ ಎಸ್ ನಿಜಲಿಂಗಪ್ಪ.—ಒಂದು ಮನೆಗೆ 400 ರೂಪಾಯಿಯಂತೆ ಅವರಿಗೆ ಹಣ ಕೊಟ್ಟಿದೆ. ಹಣ ಕೈಗೆ ಬಂದ ಕೂಡಲೆ ಮಕ್ಕಳು ಮರಿಗಾಗಿ ಸಂಸಾರದ ಬೇರೆ ಖರ್ಚಿಗಾಗಿ ಹಣದ ಕಲವು ಭಾಗ ಉಪಯೋಗಿಸಿಕೊಂಡು ಬಿಡುತ್ತಾರೆ. ಮನೆ ಕಟ್ಟಿಸಿ ಕೊಡುವುದರ ಬದಲು ಒಂದು ಮನೆಗೆ 400 ರೂಪಾಯಿ ಹಣ ಸಹಾಯ ಕೊಡಲಾಗುವುದು.

Mr. SPEAKER.—The point made out is that the entire construction ought to be done by the Government.

ಶ್ರೀ ಎಸ್. ನಿಜಲಿಂಗಪ್ಪ.—ಅದು ಹಾಗೆ ಇರುವುದಿಲ್ಲ. ಇತ್ತೀಚೆಗೆ ರೂಲ್ಸ್ ಬದಲಾವಣೆ ಯಾಗಿದೆ.